೨. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಹುಬ್ಬಳ್ಳಿಯಲ್ಲಿ ನಡೆದ ಗುಂಪು ಘರ್ಷಣೆ ಕುರಿತು.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ ನಿನ್ನೆ ಹುಬ್ಬಳ್ಳಿಯಲ್ಲಿ ಗುಂಪು ಘರ್ಷಣೆ ಆಗಿದೆ. ಅದು ಇವತ್ತಿಗೂ ಮುಂದುವರಿದಿದೆ. ಆ ಘರ್ಷಣೆಯಿಂದಾಗಿ ಬಸ್‌ಗಳಿಗೆ ಜಖಂ ಆಗಿದ್ದು ಮತ್ತು ಲಾಠಿ ಪ್ರಹಾರ ಹಾಗೂ ಅಶ್ರು ವಾಯು ಪ್ರಯೋಗವೂ ಆಗಿದೆ. ಇದು ಕೇವಲ ಒಂದು ಸಣ್ಣ ಘಟನೆಯಿಂದ ಹಿಡಿದುಕೊಂಡು ಅದು ಇಡೀ ನಗರದಲ್ಲಿ ಉದ್ರಿಕ್ತವಾದಂತಹ ವಾತಾವರಣ ನಿರ್ಮಾಣ ಮಾಡುವಂಥದ್ದು ಆಗಿದೆ. ಈ ಘಟನೆಯ ಹಿನ್ನೆಲೆ ಏನು ಇದೆ ಎನ್ನುವಂಥದ್ದನ್ನು ಸ್ವಲ್ಪ ಸರ್ಕಾರದ ಹಿರಿಯ ಅಧಿಕಾರಿಗಳು ಅಭ್ಯಾಸ ಮಾಡಬೇಕು. ಆಸ್ತಿ ನವೀಕರಣ ಮಾಡುವಂತಹ ಸಂದರ್ಭದಲ್ಲಿ ಈ ಘಟನೆ ನಡೆದಿರುವಂಥಾದಾಗಿದೆ. ಹೀಗಾಗಿ ಈ ಒಂದು ಘಟನೆ ಕೇವಲ ಅಲ್ಲಿಗೆ ಸಂಬಂಧಪಟ್ಟದ್ದು ಆಗಿಲ್ಲ ವಾಸ್ತವಿಕವಾಗಿ ದೇವಾಡಿಗ ಎನ್ನುವಂತಹ ವ್ಯಕ್ತಿಗೆ ಸಂಬಂಧಿಸಿದ ಅಂಗಡಿಗೆ ಕುರಿತು ಆದಂತಹ ಘಟನೆ ಇದು. ಇದರಿಂದ ಇಡೀ ಊರಿನಲ್ಲಿ ಅದರಿಂದಾಗಿ ಅಶಾಂತಿ ವಾತಾವರಣ ಮೂಡಬಾರದು ಎನ್ನವಂಥದ್ದು ನನ್ನ ಕಳಕಳಿ ಇದೆ. ಅದಕ್ಕಾಗಿ ಬಹುಶಃ ನನಗೆ ಅನ್ನಿಸುತ್ತದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ಹಿಂಡಸಗೇರಿಯವರು ನಿನ್ನೆ ಹುಬ್ಬಳ್ಳಿಯಲ್ಲಿ ಇದ್ದರು ಎಂದು ಕಾಣಿಸುತ್ತದೆ. ಬಹುಶಃ ಅವರು ಮಾಹಿತಿ ತೆಗೆದುಕೊಂಡಿರಬಹುದು. ಅದರ ಸಲುವಾಗಿ ನನ್ನದು ಒಂದು ಕಳಕಳಿಯ ವಿನಂತಿ ಇದೆ. ಇಂತಹ ಘಟನೆಗಳು ನಡೆದಾಗ ವದಂತಿಗಳು ಸಾಕಷ್ಟು ಹಬ್ಬಲಿಕ್ಕೆ ಸಾಧ್ಯ ಇದೆ. ಸುಳ್ಳು ಸುಳ್ಳು ವದಂತಿಗಳು ಹಬ್ಬಲಿಕ್ಕೆ ಸಾಧ್ಯ ಇದೆ. ಆ ದೃಷ್ಟಿಯಿಂದ ಇವತ್ತು ಎರಡೂ ಕೋಮಿನವರು, ಅವರು ಯಾವುದೇ ಕೋಮಿನವರು ಇರಬಹುದು. ಅವರು ಶಾಂತತೆಯನ್ನು ಕಾಪಾಡಿಕೊಂಡು ಹೋಗಬೇಕೆಂಬುದು ನನ್ನ ಕಳಕಳಿಯ ವಿನಂತಿ ಇದೆ. ಹುಬ್ಬಳ್ಳಿಯಲ್ಲಿ ಹಿಂದೆಲ್ಲಾ ಬಹಳಷ್ಟು ಗಲಭೆಗಳು ಆಗಿ, ಈಗ ಒಂದು ಮೂರ್‍ನಾಲ್ಕು ವರ್ಷದಿಂದ ಬಹಳ ಒಳ್ಳೆಯ ರೀತಿಯಿಂದ, ಸೌಹಾರ್ದ ರೀತಿಯಾದಂತಹ ವಾತಾವರಣದಲ್ಲಿ ಜನರು ಇವತ್ತು ವಾಸವಾಗಿದ್ದಾರೆ. ತಮ್ಮ ದಿನನಿತ್ಯದ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವುದೋ ಒಂದು ಸಣ್ಣ ಘಟನೆಯನ್ನು ಮುಂದು ಮಾಡಿಕೊಂಡು ಅದು ದೊಡ್ಡದಾಗಿ ಬೆಳೆಯುವಂತಹದು ಆಗಬಾರದು. ಅದಕ್ಕಾಗಿ ಕಟ್ಟುನಿಟ್ಟಾಗಿ ಕ್ರಮ ಆಗಬೇಕು. ನಿನ್ನೆ ಮಾನ್ಯ ಖರ್ಗೆಯವರ ದೃಷ್ಟಿಗೂ ಹುಬ್ಬಳ್ಳಿ ಘಟನೆ ಬಗ್ಗೆ ತೆಗೆದುಕೊಂಡು ಬಂದಿದ್ದೇನೆ. ನನಗೆ ಫೋನ್ ಬಂದ ತಕ್ಷಣ ಅವರ ದೃಷ್ಟಿಗೆ ತೆಗೆದುಕೊಂಡು ಬಂದೆ. ಬಹುಶಃ ಅವರು ಇದರ ಬಗ್ಗೆ ಅಲ್ಲಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿರಬಹುದು. ಈಗ ನಾನು ಬೆಳಿಗ್ಗೆ ಫೋನ್ ಮಾಡಿದ್ದೆ. ಇವತ್ತು ಬೆಳಿಗ್ಗೆ

ವಾತಾವರಣ ಸರಿ ಇದೆ ಎನ್ನುವಂತಹದು ಇದೆ. ಆದರೆ ಸುಳ್ಳು ವದಂತಿಗಳು ಹಬ್ಬಿಕೊಂಡಿವೆ. ಸಣ್ಣ ಪುಟ್ಟ ಘಟನೆಗಳ ನೆಪ ಮಾಡಿಕೊಂಡು ಅದು ಬೇರೆ ಬೇರೆ ರೀತಿಯಿಂದ ಪರಿಣಾಮ ಆಗಬಹುದು. ಸಮಾಜದಲ್ಲಿರುವ ದುಷ್ಕರ್ಮಿಗಳು ಅದರ ಒಂದು ದುರುಪಯೋಗ ತೆಗೆದುಕೊಳ್ಳುವಂತಹ ಸಾಧ್ಯತೆ ಇದೆ. ಅದಕ್ಕಾಗಿ ಸರ್ಕಾರ ಇವತ್ತು ಅಲ್ಲೇನು ಆಸ್ತಿ ವಿಚಾರದಲ್ಲಿ ಗಲಾಟೆ ಆಗಿದೆ, ದೇವಾಡಿಗ ಎನ್ನುವಂತಹ ವ್ಯಕ್ತಿಯ ಅಂಗಡಿ ನವೀಕರಣದ ಆಸ್ತಿ ಇದೆಯಲ್ಲಾ ಅದರ ಬಗ್ಗೆ ಏನಾದರೂ ಒಂದು ಬಂದೋಬಸ್ತ್ ಮಾಡಿ. ಆ ದೇವಾಡಿಗನಿಗೆ ಏನಾದರೂ ಪೋಲೀಸ್ ರಕ್ಷಣೆ ಕೊಟ್ಟು ಸರಿಯಾದ ಒಂದು ಕ್ರಮ ತೆಗೆದುಕೊಂಡರೆ ಬಹುಶಃ ಈ ಘಟನೆ ಅಲ್ಲಿಗೇ ಸೀಮಿತ ಆಗುತ್ತದೆ. ಇಲ್ಲದಿದ್ದರೆ ಇಡೀ ಊರಿಗೆ ಅಶಾಂತಿ ನೆಲೆಸುವಂತಹ ಘಟನೆ ಆಗಬಹುದು. ಅದಕ್ಕೆ ದಯವಿಟ್ಟು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಇನ್‌ಸ್ಟ್ರಕ್ಷನ್ ಕೊಟ್ಟು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ ಮತ್ತು ಹುಬ್ಬಳ್ಳಿ ನಗರದ ಮಹಾ ಜನತೆಗೆ ನಾನು ಏನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾವುದೇ ರೀತಿಯಾದ ವದಂತಿಗಳಿಗೆ ಕಿವಿಗೊಡದೆ ಶಾಂತಿಯನ್ನು ಕಾಪಾಡಿಕೊಂಡು ಹೋಗಬೇಕೆಂದು ತಮ್ಮ ಮೂಲಕ ಏನಂತಿಯನ್ನೂ ಮಾಡಿಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್(ಧಾರವಾಡ): ನಾನು ಪತ್ರಿಕೆಯಲ್ಲಿ ಓದಿರುವಂತಹ ದೃಷ್ಟಿಯಿಂದ ನೋಡಿದರೆ ಬಹಳ ಒಂದು ಭಯಂಕರವಾದಂತಹ ಪರಿಸ್ಥಿತಿ ಇದೆ. ಅದಕ್ಕಾಗಿ ಸೆಕ್ಷನ್ 144 ಚಾಲೂ ಮಾಡಿದ್ದು ನೋಡಿದರೆ ಭಯಂಕರ ಪರಿಸ್ಥಿತಿಯ ಅರಿವು ಆಗುತ್ತದೆ. ಇಂತಹ ಒಂದು ಗಲಾಟೆಗಳು ಆಗಬಾರದು. ಆ ದೃಷ್ಟಿಯಿಂದ ಅದರೊಳಗೆ ಏನು ಕ್ರಮವನ್ನು ಸರ್ಕಾರ ಇವತ್ತು ತೆಗೆದುಕೊಳ್ಳಬೇಕು, ಆ ಕ್ರಮ ತೆಗೆದುಕೊಂಡು ಅಲ್ಲಿ ನ್ಯಾಯ ಒದಗಿಸಬೇಕು. ಏಕೆಂದರೆ ಇದು ಬಹಳ ದಿವಸಗಳಿಂದ ಅಲ್ಲಿ ಹೊಗೆ ಆಡುತ್ತಿದೆ ಎಂದು ಕಂಡು ಬರುತ್ತಿದೆ. ಆ ದೃಷ್ಟಿಯಿಂದ ಒಂದು ಶಾಂತತೆ ಇರುವಂತಹ ಪ್ರದೇಶದಲ್ಲಿ ಈ ಘಟನೆಯಿಂದ ಉತ್ತರ ಕರ್ನಾಟಕದಲ್ಲಿ ಅದರಿಂದ ಬೇರೆ ಭಯಂಕರ ಪರಿಸ್ಥಿತಿಯ ದಾರಿ ಹಿಡಿಯಬಾರದು. ಅದಕ್ಕೆ ಸರ್ಕಾರ ದಯವಿಟ್ಟು ಸರಿಯಾದಂತಹ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಏನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎ.ಎಂ.ಹಿಂಡಸಗೇರಿ(ಕಾರ್ಮಿಕ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದವರು ವಿಷಯ ಪ್ರಸ್ತಾಪ ಮಾಡಿದ್ದಾರೆ. ನಾನು ನಿನ್ನೆ ಕೌನ್ಸಿಲ್‌ನಲ್ಲಿದ್ದೆ. ನನಗೆ ಫೋನ್ ಬಂದ ಕೂಡಲೇ ಮಾನ್ಯ ಗೃಹ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದೆ.

ಶ್ರೀ ಜಬ್ಬಾರ್ ಖಾನ್ ಹೊನ್ನಾಳಿ(ಹುಬ್ಬಳ್ಳಿ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ಶಾಂತಿಯ ಸಲುವಾಗಿ, ನಾವಾಗಲೀ ಅವರಾಗಲೀ ಶಾಂತಿಯ ಸಲುವಾಗಿ ಪ್ರಯತ್ನ ಮಾಡಬೇಕು. ಅದು ನಿಜ ಸಂಗತಿ. ಆದರೆ ಈ ಹಿಂದೆ ನನ್ನ ಮನಸ್ಸಿಗೆ ಅನಿಸಿದ ಮಟ್ಟಿಗೆ ಮೂರ್ನಾಲ್ಕು ವರ್ಷದಿಂದ ಅಲ್ಲಿ ಒಂದು ದರಗಾ ಇದೆ. ಆ ದರಗಾದ ಸುತ್ತಮುತ್ತಲೂ ಇರತಕ್ಕಂಥಹ ಪ್ರಾಪರ್ಟಿ ಏನು ಇದೆಯಲ್ಲಾ ಅದು ದರಗಾಕ್ಕೆ ಸಂಬಂಧಿಸಿದ್ದು. ವಾಮನ್ ಅವರು ಬಾಡಿಗೆ ಮೇಲೆ ಅಲ್ಲಿದ್ದರು. ಅವರು ಬಾಡಿಗೆಯ ಆಧಾರದಲ್ಲಿ ಹೋಟೆಲ್‌ನ್ನು ಅಲ್ಲಿ ನಡೆಸುತ್ತಿದ್ದರು. ನಿತ್ಯಾನಂದ ಹೋಟೆಲ್ ಎಂಬ ಹೆಸರಿನಿಂದ ಅವರು ಹೋಟೆಲ್ ನಡೆಸುತ್ತಿದ್ದರು. ಆ ಹೋಟೆಲ್ ನಡೆಸುತ್ತಿದ್ದರೂ ಅವರು ಐದು ವರ್ಷಗಳಿಂದ ಬಾಡಿಗೆಯನ್ನು ಈ ದರಗಾ ಕಮಿಟಿಯವರಿಗೆ ಕೊಟ್ಟಿಲ್ಲ. ಕಡೆಗೆ ಈ ಆಸ್ತಿ ವಿವಾದ ಸರ್ಕಾರ ಮತ್ತು ದರಗಾ ಕಮಿಟಿ ಒಳಗೆ ಇದೆ ಮತ್ತು ಅದರ ಬಗ್ಗೆ ಕೇಸ್ ಸಹ ಇದೆ. 30.6.96ರಲ್ಲಿ ಅಡಿಷನಲ್ ಜಡ್ಜ್ ಕೋರ್ಟಿನಲ್ಲಿ ಕೇಸ್ ಸಹ ಪೆಂಡಿಂಗ್ ಇದೆ ಮತ್ತು ಅವರು ಈ ಪ್ರಾಪರ್ಟಿ ಬಗ್ಗೆ ಇಂಜನ್‌ಕ್ಷನ್ ಸಹ ಕೊಟ್ಟಿರುತ್ತಾರೆ. ಯಾವುದೇ ತರಹದ ಪರಭಾರೆ ಮಾಡತಕ್ಕದ್ದಲ್ಲ ಎಂದು ಇಂಜನ್‌ಕ್ಷನ್ ಕೊಟ್ಟಿರುತ್ತಾರೆ. ಆದರೂ ಸಹಿತ ಈ ವಾಮನ ಎಂಬುವರು ಎಂಟು ವರ್ಷದಿಂದ ಬಾಡಿಗೆ ಕೂಡಲಾರದೆ ಕಮಿಟಿಗೆ ಕೇಳಲಾರದೆ ಬೇರೆಯವರಿಗೆ ಕೊಟ್ಟಿದ್ದಾರೆ. ಇದು ಆಸ್ತಿ ಬಗ್ಗೆ ವಿವಾದ ಇದೆ.

ಅಧ್ಯಕ್ಷರು: ಮಂತ್ರಿಗಳು ಉತ್ತರ ಹೇಳುವವರೆಗೂ ಆ ಕಾನ್ವರ್ಸೇಷನ್ ಬೇಡ. ಮಂತ್ರಿಗಳು ಉತ್ತರ ಹೇಳಲಿ. ಕೇಸ್ ಪೆಂಡಿಂಗ್ ಇದೆ, ಸಬ್ ಜ್ಯುಡಿಸ್ ಆಗುತ್ತದೆ, ನಾನು ಅಲೋ ಮಾಡುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ ಆಸ್ತಿ ಯಾರದ್ದು ಇದೆ ಎಂದು ನಾವು ಪ್ರಸ್ತಾಪ ಮಾಡಲು ಹೋಗಲಿಲ್ಲ. ಯಾರು ಓನರ್ ಎಂದು ಪ್ರಸ್ತಾಪ ಮಾಡಲು ಹೋಗಲಿಲ್ಲ.

ಅಧ್ಯಕ್ಷರು: ವಿಷಯ ಬಹಳ ಸೀರಿಯಸ್ ಆಗಿದೆ ಎಂದು ಹೇಳುತ್ತೀರಿ, ಅದನ್ನು ಸರಿಪಡಿಸಿ ಎಂದು ಹೇಳಿ.

(ಗೊಂದಲ)

ಶ್ರೀ ಜಬ್ಬಾರ್ ಖಾನ್ ಹೊನ್ನಾಳಿ: ಆಸ್ತಿ ಬಗ್ಗೆ ವಿವಾದ ಇದೆ. ಕೇಸ್ ಬಗ್ಗೆ ನಾನು ಹೇಳಲು ಹೋಗುವುದಿಲ್ಲ. ಕೇಸ್ ಪೆಂಡಿಂಗ್ ಇದೆ.

ಅಧ್ಯಕ್ಷರು: ಕೇಸ್ ಬಗ್ಗೆ ಇಲ್ಲಿ ವಿಚಾರಣೆ ಬೇಕಾಗಿಲ್ಲ. ಮಾನ್ಯ

ಹಿಂಡಸಗೇರಿಯವರೇ, ತಾವು ಉತ್ತರ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ನಾನು ಯಾವಾಗಲೂ ಅದರ ಬಗ್ಗೆ ಮಾತನಾಡಲು ಹೋಗಲಿಲ್ಲ. ಹಾಗೆ ನೋಡಿದರೆ ನಿಜವಾಗಿಯೂ ಡಿ.ಸಿ. ಅವರ ಹೆಸರಿನಲ್ಲಿರುವ ಆಸ್ತಿ ಅದು. ನಾನು ಹೆಚ್ಚಿಗೆ ವಿಚಾರ ಮಾಡಲಿಕ್ಕೆ ಹೋಗಲಿಲ್ಲ.

MR.SPEAKER: I don't want any details.

ಶ್ರೀ ಜಗದೀಶ್ ಶೆಟ್ಟರ್: ನಾನು ಯಾರು ಮಾಲೀಕರು ಎಂದು ಆ ರೀತಿ ಮಾತನಾಡಲು ಹೋಗಲಿಲ್ಲ. ಯಾರು ಕಬ್ಜಾದಲ್ಲಿದ್ದಾರೆ, ಅದರ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕು.

ಅಧ್ಯಕ್ಷರು: ಸೀರಿಯಸ್ ಆಗಿದೆ ಸಿಚ್ಯುಯೇಷನ್. ವೆರಿಫೈ ಮಾಡಿ ಎಂದು ಹೇಳುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್: ಆಸ್ತಿ ದೇವಾಡಿಗನದ್ದು ಇದೆಯೋ ಅಥವಾ ಸರ್ಕಾರದ್ದು ಇದೆಯೋ ದರಗಾದವರದ್ದು ಇದೆಯೋ ಎಂಬ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗಲಿಲ್ಲ. ಆದರೆ ಶಾಂತಿ ಕಾಪಾಡಿಕೊಂಡು ಹೋಗಬೇಕು. ಮಾನ್ಯ ಉಸ್ತುವಾರಿ ಸಚಿವರು ಇದ್ದಾರೆ. ಬಹುಶಃ ನನಗೆ ಅನ್ನಿಸುತ್ತದೆ. ಅವರೂ ಸಹ ಎಲ್ಲಾ ರೆಕಾರ್ಡ್ಸ್ ನೋಡಿಕೊಳ್ಳಲಿ. ಸರ್ಕಾರದ್ದು ಮಾಲಿಕತ್ವ ಇದೆಯೋ ಇಲ್ಲವೋ ಆ ದರಗಾದ ಮಾಲಿಕತ್ವ ಇದೆಯೋ ಅಥವಾ ದೇವಾಡಿಗನದ್ದು ಮಾಲಿಕತ್ವ ಇದೆಯೋ ನೋಡಿಕೊಳ್ಳಲಿ. ಅವರು ಸ್ವಲ್ಪ ಇದರ ಬಗ್ಗೆ ಮನಸ್ಸು ಮಾಡಿದರೆ ಈ ಸಮಸ್ಯೆ ಸಾಲ್ವ್ ಆಗುತ್ತದೆ. ಬರೇ ತಾತ್ಕಾಲಿಕ ಅಲ್ಲ. ಇದೊಂದು ಖಾಯಂ ಆಗಿ ಪರಿಹಾರ ಸಿಗಲಿಕ್ಕೆ ಸಾಧ್ಯ ಇದೆ. ಅದಕ್ಕೆ ಇದರ ಬಗ್ಗೆ ಮಾನ್ಯ ಉಸ್ತುವಾರಿ ಸಚಿವರು ಸ್ವಲ್ಪ ಲೀಡ್ ತೆಗೆದುಕೊಳ್ಳಬೇಕು.

ಶ್ರೀ ಎಂ.ಎಂ.ಹಿಂಡಸಗೇರಿ(ಕಾರ್ಮಿಕ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್ ಅವರಾಗಲೀ, ಹುಬ್ಬಳ್ಳಿ ಶಾಸಕರಾಗಲೀ ನಿನ್ನೆ ಗಲಭೆ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿ ಸದನದ ಗಮನವನ್ನು ಸೆಳೆದಿದ್ದಾರೆ. ಯಾವಾಗಲೂ ಹುಬ್ಬಳ್ಳಿ ಸೂಕ್ಷ್ಮ ಪ್ರದೇಶ. ಸುದೈವದಿಂದ 4-5 ವರ್ಷಗಳಿಂದ ಅಲ್ಲಿ ಬಹಳ ಶಾಂತಿ ಇದೆ. ಅಲ್ಲಿ ಒಂದು ಐತಿಹಾಸಿಕ ದರಗಾ ಇದೆ. ಆಸ್ತಿ ಬಗ್ಗೆ ಏನೇ ವ್ಯಾಜ್ಯ ಇದ್ದರೂ ಸಹ ಅದು ಕೋರ್ಟ್‌ನಲ್ಲಿದೆ. ಅದು ಕೋರ್ಟ್‌ನಲ್ಲಿ ಇದ್ದರೂ ನಾನು ಮಾನ್ಯ ಜಗದೀಶ್ ಶೆಟ್ಟರ್ ಅವರು ಹಾಗೂ ಬಸವರಾಜ್ ಬೊಮ್ಮಾಯಿಯವರು ಕೂಡಿ ಅದರ ಬಗ್ಗೆ ಏನಾದರೂ ಕಾಂಪ್ರಮೈಸ್ ಮಾಡಬೇಕು ಎಂದು ಮಾತನಾಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ನಾವು

ಹೇಳಿಕೊಳ್ಳುತ್ತೇವೆ. ಇದ್ದ ಪರಿಸ್ಥಿತಿಯನ್ನು ಎಕ್ಸಾಮಿನ್ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದರೆ ತದನಂತರ ಏನು ನಿರ್ಣಯ ಆಗುತ್ತದೋ ಅದು ಆಗಲಿ. ನಾನಾಗಲೀ ಅವರಾಗಲೀ ಅಲ್ಲಿನ ಸಾರ್ವಜನಿಕರಲ್ಲರಿಗೆ ಅಪೀಲ್ ಮಾಡಿಕೊಳ್ಳುತ್ತೇವೆ. ಯಾವುದೆ ಊಹಾಪೋಹಗಳಿಗೆ ಎಡೆಗೊಡದಂತೆ ಶಾಂತಿ ಕಾಪಾಡಬೇಕೆಂದು ಅಧಿಕಾರಿಗಳಿಗೆ ನಿನ್ನೆ ಹೇಳಿದ್ದೇವೆ. ಹೀಗಾಗಿ ಅಲ್ಲಿ ಶಾಂತಿ ನೆಲೆಸಿದೆ. ಅಲ್ಲಿರುವ ದರ್ಗಾದ ಬಳಿ ಇತರೆ ಧರ್ಮೀಯರು, ಪಕ್ಷದವರು ಹೋಗಬಾರದು. ಅಲ್ಲಿ ಸಮಿತಿ ಇದ್ದು, ಇದರ ಎದುರುಗಡೆ ಸುಮಾರು ಐವತ್ತು ಅಡಿಗಳಷ್ಟು ದೂರದಲ್ಲಿ ಪೊಲೀಸ್ ಠಾಣೆ ಇರುವುದಲ್ಲದೆ, ಸ್ಥಳದಲ್ಲಿ ನೂರಾರು ಜನ ಪೊಲೀಸರಿರುತ್ತರಾದ್ದರಿಂದ ಆಗುತ್ತಿರುವ ಸಂಘರ್ಷವನ್ನು ತಡೆಹಿಡಿದು ಪ್ರಕರಣವನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರದಿಂದ ವರದಿ ತರಿಸಿಕೊಳ್ಳಲಿ. ಆ ಕುರಿತು ನಾವು ಒಂದು ನಿರ್ಣಯ ಕೈಗೊಂಡು, ಅಲ್ಲಿನ ಸಮಿತಿಯ ಸಂಬಂಧಪಟ್ಟ ಕಾರ್ಯಕರ್ತರೊಂದಿಗೆ ಸಂಪರ್ಕವೇರ್ಪಡಿಸಿಕೊಂಡು ವ್ಯಾಜ್ಯ ಬಗೆಹರಿಸುವುದಕ್ಕೆ ಪ್ರಯತ್ನಿಸುತ್ತೇವೆ.

ಅಧ್ಯಕ್ಷರು: ಆದಷ್ಟು ಬೇಗ ಅಲ್ಲಿ ಉದ್ಭವಿಸಿರುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ವಿಷಯ ಗಂಭೀರ ಸ್ವರೂಪ ಪಡೆಯುವ ಸಂಭವವಿದೆ.

ಶ್ರೀ ವಿ.ಎಂ.ಹಿಂಡಸಗೇರಿ: ಸಮಸ್ಯೆ ಬಗೆಹರಿಸುವ ಕುರಿತು ಪ್ರಯತ್ನಿಸುತ್ತೇವೆ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಶೃಂಗಸಭೆ ರಾಷ್ಟ್ರದ ಭದ್ರತೆಯಲ್ಲಿ ಆರ್ಥಿಕ ಮಟ್ಟದಲ್ಲಿ ಗಡಿ ಪ್ರದೇಶದಲ್ಲಿ.....

ಅಧ್ಯಕ್ಷರು: ನೀಲಕಂಠಪ್ಪನವರೇ, ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಬೇಕಾಗಿರುವ ವಿಷಯವನ್ನು ತಾವು ಇಲ್ಲೇಕೆ ಪ್ರಸ್ತಾಪಿಸುತ್ತಿದ್ದೀರಿ? ದಯವಿಟ್ಟು ಪ್ರಸ್ತಾಪಿಸಬೇಡಿ. I have no jurisdiction to allow it. I have no jurisdiction even to dictate it to Parliament or Prime Minister.

ಶ್ರೀ ಬಿ.ಆರ್.ನೀಲಕಂಠಪ್ಪ: ಸಂಬಂಧ ವಿಕಿದೆಯೆಂಬುದನ್ನು ಹೇಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು: ಪಾಯಿಂಟ್ ಆಫ್ ಆರ್ಡರ್ ಬೇಕಾಗಿಲ್ಲ. ನಾನೇ ಅವರಿಗೆ ಹೇಳಿದ್ದೇನೆ. I have no jurisdiction to allow it. I am very sorry. ದಯವಿಟ್ಟು ಪ್ರಸ್ತಾಪಿಸಬೇಡಿ. ತಾವು ಪ್ರಸ್ತಾಪಿಸುತ್ತಿರುವ ವಿಷಯವೇನೋ ಗಂಭೀರವಾಗಿದೆ. ಆದರೆ, ಅದನ್ನು ಇಲ್ಲಿ ಪ್ರಸ್ತಾಪಿಸುವಂತಿಲ್ಲ. ತಾವು

ಅರ್ಥಮಾಡಿಕೊಳ್ಳಬೇಕು.

ಆ) ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿಪಡಿಸುವ ವಿಚಾರದಲ್ಲಿ ಸರ್ಕಾರ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ಹಿಂತೆಗೆದುಕೊಳ್ಳುವ ಬಗ್ಗೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ಸರ್ಕಾರದವರು ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ನಡೆಸಿ ಈಗಾಗಲೇ 65 ದಿವಸಗಳಿಗೂ ಹೆಚ್ಚಾಗಿದೆ. ಮೇ 5ನೇ ತಾರೀಖಿನಂದು ಪ್ರಥಮ ಹಂತದ ಚುನಾವಣೆ ಜರುಗಿದ್ದರೆ ಜುಲೈ 8ನೇ ತಾರೀಖಿನಂದು ಎರಡನೆಯ ಹಂತದ ಚುನಾವಣೆಗಳು ನಡೆದು ಮುಗಿದಿವೆ. ನಮ್ಮಿಂದ ಅಧಿಕಾರ ತೆಗೆದುಕೊಂಡಿರುವ ಚುನಾಯಿತ ಪ್ರತಿನಿಧಿಗಳು ಮತ್ತು ಚುನಾವಣೆಗೆ ಪೂರ್ವದಲ್ಲಿ ಜನರಿಗೆ ಕೊಟ್ಟಿರುವ ಆಶ್ವಾಸನೆಗಳನ್ನು ಈಡೇರಿಸಬೇಕೆಂಬ ದೃಷ್ಟಿಯಿಂದ ತಮಗೆ ಯಾವಾಗ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ಸಿಗುತ್ತದೆಯೆಂಬ ಸಹಜ ಕಾತುರತೆಯಿಂದಿದ್ದಾರೆ. ಈ ಮಧ್ಯೆ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಕುರಿತು ನನಗೆ ಗೊತ್ತಿರುವಂತೆ ಸರ್ಕಾರಕ್ಕೆ ಅಧಿಕಾರವಿಲ್ಲ. ಮತ್ತು ಆಡಳಿತಾಧಿಕಾರಿಗಳನ್ನು ನೇಮಿಸಿದ ಬಳಿಕವೂ ಅವರನ್ನು ಹೆಚ್ಚು ದಿವಸಗಳ ಕಾಲ ಮುಂದುವರೆಸುವುದಕ್ಕೂ ಸಾಧ್ಯವಿಲ್ಲ. ಈಗ ಚುನಾವಣೆಗಳನ್ನು ನಡೆಸಿರುವ ಮುಖ್ಯ ಉದ್ದೇಶ ಜನರಿಗೆ ನೇರವಾಗಿ ಅಧಿಕಾರ ಕೊಡುವ ಮೂಲಕ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಬೇಕೆಂಬುದೇ ಆಗಿದೆ. ದುರದೃಷ್ಟವಶಾತ್, ಮೇ ಐದನೇ ತಾರೀಖು ಆಯ್ತು ಅದಕ್ಕೂ ಮುಂಚಿತವಾಗಿ ನಡೆದಿರುವಂಥ ಚುನಾವಣೆಗಳಲ್ಲಿ ಮೀಸಲಾತಿಯನ್ನು ನಿಗದಿಪಡಿಸತಕ್ಕ ಥ ಸನ್ನಿವೇಶದಲ್ಲಿ ಸರ್ಕಾರ ಯಾವ್ಯಾವ ರೀತಿ ನಡೆದುಕೊಂಡಿತ್ತು ಎಂಬ ಬಗ್ಗೆ ನಾನು ಪ್ರಸ್ತಾಪಿಸಬಯಸುವುದಿಲ್ಲ. ಅದಂತೂ ಮೀಸಲಾತಿಯ ವ್ಯವಸ್ಥೆಗೆ ಒಂದು ರೀತಿಯ ಅಪಚಾರವೆಂದರೂ ತಪ್ಪಾಗುವುದಿಲ್ಲ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ನಾವು ಕೋರ್ಟಿಗೆ ಹೋದಂಥ ಸಂದರ್ಭದಲ್ಲಿ 'ಈಗಾಗಲೇ ಈ ಕುರಿತ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ'ವೆಂದು ಕೋರ್ಟ್ ತಿಳಿಸಿದ್ದರಿಂದ ನಾವೂ ಸಹ ಸುಮ್ಮನಾದವು. ಇದಾದ ಬಳಿಕ ಎರಡನೇ ಹಂತದ ಚುನಾವಣೆಗಳು ನಡೆದಾಗ ನಾವೇ ಸ್ವತಃ ಅನೇಕ ಸಾರಿ ಮುಖ್ಯಮಂತ್ರಿಗಳ ಗಮನಕ್ಕೆ ತಂದೆವು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಇದನ್ನು ಮಾಡುವುದಕ್ಕಾಗದಿರಬಹುದು. ಕೊನೇ ಪಕ್ಷ ನೀವಾದರೂ ಇದನ್ನು ಮಾಡಿ. ಚುನಾವಣಾ ವೆಚ್ಚದ ಮೇಲೆ ಕಡಿವಾಣ ಮತ್ತು ಯಾವ್ಯಾವ ವರ್ಗಗಳಿಗೆ